

# ಭಾವ ಸರೋವರದಲ್ಲಿ ವಿಷಾದದ ತರಂಗಗಳು

**ಮಧುರವಾದ ಒಂದು ಪ್ರೇಮಕತೆಯನ್ನು ಅಷ್ಟೇ ನವಿರಾಗಿ ಹೇಳುತ್ತದೆ ಈ ಕಿರುಚಿತ್ರ. ನಾಸಿರುದ್ದೀನ್ ಶಾ ಅವರು ಕಣ್ಣಲ್ಲೇ ತುಳುಕಿಸುವ ಭಾವ ಸರೋವರವನ್ನು ನೋಡುವುದೇ ಒಂದು ಚಂದದ ಅನುಭವ.**

■ ಗೌರಿ

'ಇಷ್ಟು ವರ್ಷಗಳ ನಂತರ... ಈ ವಯಸ್ಸಿನಲ್ಲಿ... ನಾವು ಯಾಕೆ..?' ಮುಂದೆ ಮಾತನಾಡಲಾಗದ ಹಾಗೆ ಅವಳ ಕತ್ತು ಬಿಗಿಯುತ್ತದೆ. ಎದುರು ನಿಂತವನ ಕಣ್ಣುಗಳು ಹನಿಗೂಡಿವೆ. ಅವನೂ ಅಷ್ಟೇ ಗದ್ಗದಿತನಾಗಿ ಹೇಳುತ್ತಾನೆ. 'ಬಹುಶಃ ನಾವಿನ್ನೂ ಬದುಕಿನಲ್ಲಿ ಸಾಕಷ್ಟು ನೋಡುವುದು ಉಳಿದಿದೆ; ಒಬ್ಬರ ಕಣ್ಣಿನಲ್ಲಿ ಇನ್ನೊಬ್ಬರು'.

ಮುಂಜಾನೆಯ ಮೊಗ್ಗಿನ ತುದಿಯಲ್ಲಿ ಕೂತಿದ್ದ ಇಬ್ಬನಿಯು, ಹೂ ಅರಳತೊಡಗಿದ ಹಾಗೆಲ್ಲ ನಿಧಾನ ಕೆಳಗಿಳಿದು ಆವಿಯಾಗುವಷ್ಟೇ ಸೂಕ್ಷ್ಮ, ಸಮ್ಮೋಹಕ ಪ್ರೇಮತರಂಗವನ್ನು ಎಬ್ಬಿಸುವ ಕಿರುಚಿತ್ರ 'ದ ವ್ಯಾಲೆಟ್'. ಇಲ್ಲಿ ಹರೆಯದ ಹುಡುಗರ ಹಸಿಬಿಸಿತನವಿಲ್ಲ. ಅವರಿಬ್ಬರೂ ಹುಚ್ಚೆದ್ದು ಪ್ರೀತಿಸುವ, ಪ್ರೀತಿಗಾಗಿ ಜಗತ್ತನ್ನೇ ಎದುರಿಸುವ ವಯಸ್ಸನ್ನು ದಾಟಿ ಬಂದಾಗಿದೆ. ಹಾಗೆ ನೋಡಿದರೆ ಎದುರಿಸಬೇಕು ಎಂದರೂ ಅವರ ಪಾಲಿಗೆ ಅವರ ಜಗತ್ತು ಉಳಿದಿಲ್ಲ. ಎಂದೋ ಹೃದಯದಲ್ಲಿ ಕೆತ್ತಿಕೊಂಡಿದ್ದ ಪ್ರೇಮ ಗುರುತಿನ ಮಧುರ ನೆನಪಷ್ಟೇ ಅವರ ಪಾಲಿಗೆ ಉಳಿದಿರುವುದು. ಅವರೀಗ ಎಲ್ಲ ಬಂಧ ಸಂಬಂಧಗಳಿಂದ ಕಳಚಿಕೊಂಡು ವೃದ್ಧಾಶ್ರಮ ಸೇರಿದ್ದಾರೆ. ಎಂದೋ ಕೂಡುವ ಹವಣಿಕೆಯಲ್ಲಿದ್ದ ಅವರ ಬದುಕಿನ ನದಿ ಅನಾಮಿಕ ತಿರುವಿನಲ್ಲಿ ಸೀಳಿಕೊಂಡು ದಿಕ್ಕುಬದಲಿಸಿ ದೂರಾಗಿದೆ. ಎಲ್ಲೆಲ್ಲೋ ಹರಿದು ಮತ್ತೆ ಒಂದೇ ಬಿಂದುವಿನಲ್ಲಿ ಸೇರಿದರೂ ಅವರಿಗೆ ಅದರ ಪತ್ತೆ ಹತ್ತಿಲ್ಲ.

'ದಿ ವ್ಯಾಲೆಟ್' ಕಥೆಯ ಕಾರಣಕ್ಕಾಗಿ ನೋಡಬೇಕಾದ ಕಿರುಚಿತ್ರವಲ್ಲ. ಅದು ನಮ್ಮ ಮನಸ್ಸಿನಲ್ಲಿ ಮೂಡಿಸುವ ಮಧುರ ಭಾವತಲ್ಲಣದ ಕಾರಣಕ್ಕಾಗಿ ನೋಡಬೇಕಾದ ಕಿರುಚಿತ್ರ. ಇಲ್ಲಿ ಒಂದು ಚಂದದ ಪ್ರೇಮ ಕಥೆಯಿದೆ. ಅದನ್ನು ಹೇಳಿರುವ ರೀತಿಯಲ್ಲಿಯೂ ಅಷ್ಟೇ ನವಿರುತನವಿದೆ. ಅಷ್ಟೇ ಘನವಾದ ನಟನೆಯಿದೆ. ಮಾತಿಗಿಂತ ಮೌನದಲ್ಲಿಯೇ ಎಲ್ಲವನ್ನೂ ದಾಟಿಸಬಲ್ಲ ಜಾಣ್ಮೆಯಿದೆ. ತಂಗಾಳಿಗೆ ಹೂವು ತಲೆಬಾಗುವ ರೀತಿಯ ಮೆಲುವಾದ ಸಂಗೀತವಿದೆ. ಒಂದು ಕಿರುಚಿತ್ರವನ್ನು ಆಸ್ವಾದಿಸಲು, ಬಹುಕಾಲ ನೆನಪಿನಲ್ಲಿರಿಸಿಕೊಳ್ಳಲು ಇದಕ್ಕಿಂತ ಇನ್ನೇನು ಬೇಕು ಹೇಳಿ?



**ಹೆಸರು:** ದ ವ್ಯಾಲೆಟ್
**ನಿರ್ದೇಶನ:** ಸೌಮಿತ್ರ ಸಿಂಗ್
**ನಿರ್ಮಾಣ:** ಮದನ್ ಪಲಿವಾಲ್
**ಸಂಕಲನ:** ಅಶುತೋಷ್ ಚತುರ್ವೇದಿ
**ಸಂಗೀತ:** ಅಭಿನವ್ ಆರ್. ಕೌಶಿಕ್
**ತಾರಾಗಣ:** ನಾಸಿರುದ್ದೀನ್ ಶಾ, ನವ್ನಿ ಪರಿಹಾರ್, ಗೌರವ್ ವೆಂಕಟೇಶ್, ಶಿವಾನಿ ರೈ

ವೃದ್ಧಾಶ್ರಮದಲ್ಲಿರುವ ಆ ಮುದುಕನಿಗೆ ಪದೇಪದೆ ತನ್ನ ಪರ್ಸ್ ಅನ್ನು ಕಳೆದುಕೊಳ್ಳುವ ಹವ್ಯಾಸ. ಹಾಗೊಮ್ಮೆ ಕಳೆದುಹೋದ ಪರ್ಸ್, ಸಮುದ್ರ ದಡದಲ್ಲಿ ಒಬ್ಬ ಯುವಕನಿಗೆ ಸಿಗುತ್ತದೆ. ಆ ಪರ್ಸಿನಲ್ಲಿ ಅವನು ಆ ಮುದುಕನಿಗೆ ಎಷ್ಟೋ ವರ್ಷಗಳ ಹಿಂದೆ ಹುಡುಗಿಯೊಬ್ಬಳು ಬರೆದಿದ್ದ ಪ್ರೇಮಪತ್ರವನ್ನು ನೋಡುತ್ತಾನೆ. ಅದರಲ್ಲಿನ ವಿಳಾಸ ಇಟ್ಟುಕೊಂಡೇ ಆ ಮನೆಯನ್ನು ಹುಡುಕುತ್ತಾನೆ. ಹೀಗೆ ಪರ್ಸ್ ಅನ್ನು ಅದರ ನಿಜವಾದ ಒಡೆಯನಿಗೆ ತಲುಪಿಸುವ ಯತ್ನದಲ್ಲಿ, ಮುಗಿದು ಹೋಗಿದ್ದ ಅವನ ಬದುಕಿನ ಬಹುಮುಖ್ಯ ಅಧ್ಯಾಯವನ್ನೂ ಮತ್ತೆ ತೆರೆಯುತ್ತಾನೆ. ಒಂದೇ ವೃದ್ಧಾಶ್ರಮದಲ್ಲಿದ್ದೂ ಪರಸ್ಪರ ಅರಿವಿಲ್ಲದೇ ಇದ್ದ ಹಳೆಯ ಪ್ರೇಮಿಗಳನ್ನು ಮತ್ತೆ ಒಂದು ಮಾಡುತ್ತಾನೆ.

ಪ್ರೇಮದ ಆಳದಲ್ಲಿ ಹರಿತವಾದ ವಿಷಾದದ ಎಳೆಯೂ ಇರುತ್ತದೆ. ಹಾಗಾಗಿಯೇ ಪ್ರೇಮಗೀತೆ ಕೇಳುವಾಗ ಮನಸ್ಸು ಆಳದಲ್ಲಿ ವಿಷಾದಗೊಳ್ಳುತ್ತದೆ. ಇಂಥದ್ದೊಂದು ವಿಷಾದದ ಹರಿವು ಈ ಕಿರುಚಿತ್ರದುದ್ದಕ್ಕೂ ಹರಡಿಕೊಂಡಿದೆ. ಹದವಾದ ಸಂಗೀತವೂ ಅದರ ತೀವ್ರತೆಯನ್ನು ಹೆಚ್ಚಿಸಿದೆ. ನಾಸಿರುದ್ದೀನ್ ಶಾ ಅವರು ಕಣ್ಣುಗಳಲ್ಲೇ ಭಾವಸಮುದ್ರವನ್ನು ಭೋರ್ಗರೆಸುತ್ತಾರೆ. ಮಾತಾಡದೆಯೇ ಎಲ್ಲವನ್ನೂ ಅಭಿವ್ಯಕ್ತಿಸುತ್ತಾರೆ.

ಒಟ್ಟಾರೆ ಒಂದು ಚಂದದ ಪ್ರೇಮಕಥೆಯನ್ನು ನೋಡಿದ ಅನುಭವವನ್ನು 'ದ ವ್ಯಾಲೆಟ್' ನೀಡುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/35Lerh9 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.